ಅಧ್ಯಕ್ಷರು : ಶೂನ್ಯ ವೇಳೆಯಲ್ಲಿ ಉತ್ತರಕ್ಕೆ ಮಾತ್ರ ಅವಕಾಶವಿದೆ. ಅವಕಾಶ ಕೊಡುವುದಿಲ್ಲ. ನಾನು ವೆಂಕಟರಾವ್ ನಾಡಗೌಡರಿಗೆ ಕರೆದಿದ್ದೇನೆ. ಶೂನ್ಯ ವೇಳೆಯಲ್ಲಿ ಅವಕಾಶ ಇಲ್ಲ. ತಾವು ಹಿರಿಯ ಸದಸ್ಯರು. ಸತ್ಯಾಂಶವನ್ನು ನೀವು ಬೇರೆ ರೂಪದಲ್ಲಿ ತನ್ನಿ.

ii) ವಿಷಯ : ಭಾಗ್ಯಲಕ್ಷ್ಮಿ ಯೋಜನೆಯ ಬಾಂಡ್‌ಗಳ ನೀಡದೇ ಇರುವ ಬಗ್ಗೆ.

ಶ್ರೀ ವೆಂಕಟರಾವ್ ನಾಡಗೌಡ (ಸಿಂಧನೂರು) : ಮಾನ್ಯ ಅಧ್ಯಕ್ಷರೆ, 2006–07 ಸಾಲಿನಲ್ಲಿ ಈವರೆಗೂ ಬಾಂಡುಗಳನ್ನು ನೀಡದೇ ಇರುವ ಬಗ್ಗೆ ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಪಿ.ಎಂ. ನರೇಂದ್ರಸ್ವಾಮಿ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಶ್ರೀ ವೆಂಕಟರಾವ್ ನಾಡಗೌಡರು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿರತಕ್ಕಂತಹ ವಿಷಯಕ್ಕೆ ನೀಡಿರತಕ್ಕಂತಹ ಉತ್ತರ ಭಾಗ್ಯಲಕ್ಷ್ಮಿ ಯೋಜನೆಯನ್ನು ಅನುಷ್ಠಾನಗೊಳಿಸಲು ಸರ್ಕಾರ ಆದೇಶ ಸಂಖ್ಯೆ ಮ.ಮ.ಇ 99, ಮ.ಮ.ಆ 2006, ಬೆಂಗಳೂರು ದಿನಾಂಕ: 17.10.06 ರಲ್ಲಿ ಅನುಮತಿ ನೀಡಿರುತ್ತದೆ. 2006–07ನೇ ಸಾಲಿನ ಆರ್ಥಿಕ ವರ್ಷದಿಂದ ಜಾರಿಗೆ ಬಂದಿರುತ್ತದೆ. ಸದರಿ ಆದೇಶದ ಕಂಡಿಕೆ 2,3 ರ ಅನ್ವಯ ಬಡತನದ ರೇಖೆ ಕೆಳಗಿರುವ ಕುಟುಂಬಗಳಲ್ಲಿ ದಿನಾಂಕ: 31.03.2006ರ ನಂತರ ಜನಿಸಿದ ಹೆಣ್ಣು ಮಕ್ಕಳನ್ನು ಭಾಗ್ಯಲಕ್ಷ್ಮಿ ಯೋಜನೆಯಡಿ ಫಲಾನುಭವಿಗಳನ್ನಾಗಿ ದಾಖಲಿಸಿಕೊಳ್ಳಲು ಹೆಸರು ನೋಂದಾಯಿಸಿಕೊಂಡು ಮಂಜೂರಾತಿ ನೀಡಲು ಮಗುವಿನ ಜನನ ಪ್ರಮಾಣ ಪತ್ರ ಒದಗಿಸಿದಲ್ಲಿ ಮಗು ಜನಿಸಿದ ದಿನಾಂಕದಿಂದ ಒಂದು ವರ್ಷದ ಅವಧಿವರೆಗೆ ಕಾಲಾವಕಾಶ ಕಲ್ಪಿಸಲಾಗಿದೆ. ಆದರೆ ಬಿ.ಪಿ.ಎಲ್. ಪಡಿತರ ವಿತರಣೆ ವಿಳಂಬದಿಂದ ಕೆಲವು ಫಲಾನುಭವಿಗಳನ್ನು ನೋಂದಣಿ ಮಾಡುವುದರಲ್ಲಿ ವಿಳಂಬವಾಗಿರುವ ಹಾಗೂ ಅಂಗನವಾಡಿ ಕೇಂದ್ರಗಳು ಇಲ್ಲದಿರುವ ಗ್ರಾಮ ಅಥವಾ ವಾರ್ಡ್‌ಗಳಲ್ಲಿ ಅರ್ಹ ಫಲಾನುಭವಿಗಳು ಅರ್ಜಿ ಸಲ್ಲಿಸದಿರುವ ಹಿನ್ನೆಲೆಯಲ್ಲಿ 2006–07 ನೇ ಸಾಲಿನಲ್ಲಿ ಜನಿಸಿದ ಬಿ.ಪಿ.ಎಲ್. ಕುಟುಂಬದಲ್ಲಿರುವ ಹೆಣ್ಣು ಮಕ್ಕಳನ್ನು ಯೋಜನೆಯಡಿ ನೋಂದಾಯಿಸಿಕೊಂಡು ಮಂಜೂರಾತಿ ನೀಡಲು ಸರ್ಕಾರದ ಆದೇಶ

ಸಂಖ್ಯೆ ಮ.ಮ.ಇ 99, ಮ.ಮ.ಅ. 2006, .ದಿನಾಂಕ: 14.04.2007 ರಲ್ಲಿ ಮಗು ಜನಿಸಿದ ದಿನಾಂಕದಿಂದ 15 ತಿಂಗಳ ಅವಧಿಯವರೆವಿಗೆ ಕಾಲಾವ ಕಾಶವನ್ನು ವಿಸ್ತರಿಸಲಾಗಿದೆ. ಸದರಿ ಸರ್ಕಾರದ ಆದೇಶದಲ್ಲಿ ಕಲ್ಪಿಸಿರುವ ಅವಕಾಶಗಳನ್ವಯ 2006–07ನೇ ಸಾಲಿನಲ್ಲಿ ಜನಿಸಿದ ಬಿ.ಪಿ.ಎಲ್. ಕುಟುಂಬ ದಲ್ಲಿರುವ ಹೆಣ್ಣು ಮಕ್ಕಳನ್ನು ಯೋಜನೆಯಡಿ ನೋಂದಾಯಿಸಿಕೊಂಡು ಮಂಜೂರಾತಿ ನೀಡಲು 15 ತಿಂಗಳ ಕಾಲಾವಕಾಶ ಮಾತ್ರ ಇದ್ದು ಈ ಅವಧಿಯ ನಂತರ ಸಲ್ಲಿಸಲ್ಪಟ್ಟ ಯಾವುದೇ ಅರ್ಜಿಗಳನ್ನು ನೋಂದಾಯಿ ಸಿಕೊಂಡು ಮಂಜೂರಾತಿ ನೀಡಿ ಬಾಂಡ್ ವಿತರಿಸಲು ಯೋಜನೆಯಡಿ ಅವಕಾಶವಿರುವುದಿಲ್ಲ. ಹಾಗೂ ಅವಧಿಯನ್ನು ವಿಸ್ತರಿಸಲು ಸಹ ಅವಕಾಶ ವಿರುವುದಿಲ್ಲ. 2006–07ನೇ ಸಾಲಿನಲ್ಲಿ ರಾಯಚೂರು ಜಿಲ್ಲೆಯ ಸಿಂದನೂರು ತಾಲ್ಲೂಕಿನಲ್ಲಿ ಒಟ್ಟು 2623 ಫಲಾನುಭವಿಗಳಿಂದ ಅರ್ಜಿಗಳನ್ನು ಸ್ವೀಕರಿಸಿದ್ದು ಇವುಗಳಲ್ಲಿ ಅವಧಿ ಮೀರಿ ಬಂದಂಥ 587 ಅರ್ಜಿಗಳನ್ನು ತಿರಸ್ಕರಿಸಲಾಗಿದೆ. ಉಳಿದ 2036 ಅರ್ಜಿಗಳ ಪೈಕಿ 1412 ಫಲಾನುಭವಿಗಳಿಗೆ ಬಾಂಡ್ ವಿತರಿಸಲಾಗಿದ್ದು ಉಳಿದ 624 ಫಲಾನುಭವಿಗಳಿಗೆ ಬಾಂಡ್ ಮುದ್ರಿಸಿ ವಿತರಿಸಬೇಕಾಗಿರುತ್ತದೆ.

ಅಧ್ಯಕ್ಷರು : ಎ.ಎಸ್. ಪಾಟೀಲ್‌ರು.

ಶ್ರೀ ವೆಂಕಟರಾವ್ ನಾಡಗೌಡ : ಮಾನ್ಯ ಅಧ್ಯಕ್ಷರೆ, ಅವರು ಕೊಟ್ಟಿರುವ ಉತ್ತರ ತಪ್ಪಿದೆ.

ಅಧ್ಯಕ್ಷರು : ಶೂನ್ಯ ವೇಳೆಯಲ್ಲಿ ಅವಕಾಶವಿಲ್ಲ. ಉತ್ತರ ತಪ್ಪಿದ್ದರೆ ಅದರ ಮೇಲೆ ಚರ್ಚೆ ಮಾಡಲು ನೀವು ಬೇರೆ ರೂಪದಲ್ಲಿ ತೆಗೆದುಕೊಂಡು ಬನ್ನಿ. ಪರಿಶೀಲನೆ ಮಾಡೋಣ.

ಶ್ರೀ ಅಪ್ಪಾಜಿ ಎಸ್. ನಾಡಗೌಡ : ಮಾನ್ಯ ಅಧ್ಯಕ್ಷರೆ, ನಿಯಮದ ಪುಸ್ತಕದಲ್ಲಿ ಎಲ್ಲಿಯೂ ಕೂಡ ಶೂನ್ಯ ವೇಳೆ ಎಂದು ಇಲ್ಲ. ಇದನ್ನು ತಾವಾಗಿಯೇ ಮಾಡಿಕೊಂಡಂಥ ಒಂದು ಪ್ರೊಸೀಜರ್. ಹಿಂದೆ ಶೂನ್ಯ ವೇಳೆಯಲ್ಲಿ ಏನಾದರೂ ಒಂದು ಪಾಯಿಂಟ್ ಅಥವಾ ಎರಡು ಪಾಯಿಂಟ್ ಮೇಲೆ ಕ್ಲಾರಿಫಿಕೇಶನ್ ಕೇಳುವುದಿದ್ದರೆ ಸದಸ್ಯರಿಗೆ ಅವಕಾಶವನ್ನು ಕೊಟ್ಟಿರುವ ಉದಾಹರಣೆಯುಂಟು. ಅದಕ್ಕಾಗಿ ನಿಮ್ಮ ಗಮನಕ್ಕೆ ಈವಿಷಯವನ್ನು ತರಬಯಸುತ್ತೇನೆ. ಆದರೆ 351 ನೇ ನಿಯಮದಲ್ಲಿ ಮಾತ್ರ ಮಾನ್ಯ ಸಚಿವರ ಉತ್ತರವೇನಿದೆ ಅಷ್ಟಕ್ಕೆ ಸೀಮಿತವಾಗುತ್ತದೆ. ಮಾನ್ಯ ಸಚಿವರು ಉತ್ತರ ಕೊಟ್ಟು ಕುಳಿತುಕೊಳ್ಳಬೇಕಷ್ಟೆ.

Mr. SPEAKER : In the Lok sabha, Zero Hour proceedings are allowed as a matter of convention not sanctioned by any of the rule of the House. Members raise various matters of urgent public importance some times leading to unruly scenes in the House, Recently is has been regulated by the Speaker by allowing seven members each day, each Member taking not more than one member taking not more than one minute. This has resulted in more matters being raised and designed and condues of business in an orderly manner on the floor of the House.

ಶ್ರೀ ವೆಂಕಟರಾವ್ ನಾಡಗೌಡ : ಮಾನ್ಯ ಅಧ್ಯಕ್ಷರೆ, ಒಂದು ನಿಮಿಷವಾದರೂ ಕೊಡಿ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಇದಕ್ಕೂ ಇನ್ನೂ ಮುಂದೆ ಹೋಗಿ ಹೇಳುವುದಾದರೆ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲ್ಪಡ ಬೇಕಾದ ವಿಷಯಗಳೇನೆಂದರೆ, ನಿನ್ನೆ ಸಾಯಂಕಾಲ ಅಧಿವೇಶನ ಮುಗಿದ ಮೇಲೆ ಮತ್ತು ಇವತ್ತು ಬೆಳಿಗ್ಗೆ ಸದನ ಪ್ರಾರಂಭವಾಗುವ ಅವಧಿಯೊಳಗೆ ಏನಾದರೂ ತುರ್ತು ಘಟನೆಗಳು ನಡೆದಿದ್ದರೆ ಅವುಗಳ ಬಗ್ಗೆ ಮಾತ್ರ ಸದನದಲ್ಲಿ ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಲು ಅವಕಾಶವಿದೆ. ಆದರೆ ಭಾಗ್ಯಲಕ್ಷ್ಮಿ ಯೋಜನೆ ಬಗ್ಗೆ ಮತ್ತು ಆರು ತಿಂಗಳ ಹಿಂದೆ ನಡೆದಿರುವಂಥ ಘಟನೆಯ ಬಗ್ಗೆ ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ಬರುವುದಿಲ್ಲ. ಆದರೆ ತಾವು ಅಲೊ ಮಾಡುತ್ತಿದ್ದಿರಿ. ಅದನ್ನು ಪ್ರಶ್ನೆ ಮಾಡಲು ಬರುವುದಿಲ್ಲ. ನಿಜವಾಗಿ interpretation ಮಾಡಿದರೆ ನಿನ್ನೆ ಸಂಜೆಯಿಂದ ಇಂದು ಬೆಳಿಗ್ಗೆಯ ಅವಧಿಯಲ್ಲಿ ನಡೆದಿರುವ ಘಟನೆಗಳ ಬಗ್ಗೆ ಮಾತ್ರ ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಬೇಕು.

Dr. H.C. Mahadevappa : Matter of urgent public importance.

ಶ್ರೀ ಜಗದೀಶ್ ಶೆಟ್ಟರ್ : ಅಷ್ಟಕ್ಕೆ ಮಾತ್ರ ಸೀಮಿತವಾಗಿರಬೇಕು. ರೆಗ್ಯುಲರ್ ಆಗಿರತಕ್ಕಂಥ ಪ್ರಶ್ನೆಗಳನ್ನು ಕೇಳುವುದಕ್ಕೆ ಬರುವುದಿಲ್ಲ.

ಅಧ್ಯಕ್ಷರು : ರೇವಣ್ಣನವರೆ, ನೀವು ವಿಷಯವನ್ನು ಪ್ರಸ್ತಾಪ ಮಾಡುತ್ತೀರ? ನಿಮ್ಮದು ಕೂಡ ರೂಲ್ ಪ್ರಕಾರ ಹೋದರೆ ಇದನ್ನು ತೆಗೆದುಕೊಳ್ಳುವುದಕ್ಕೇ ಬರುವುದಿಲ್ಲ. ಆದರೂ ನೀವು ಕೇವಲ ಪ್ರಸ್ತಾಪ ಮಾಡಿ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ತುಮಕೂರು ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ದಿನಾಂಕ: 11.03.2010 ರಂದು ನಡೆದಂಥ ಮಾಸಿಕ ಕೆ.ಡಿ.ಪಿ. ಸಭೆಯಲ್ಲಿ ಅಗೌರವ ತೋರಿ ಕರ್ತವ್ಯ ಲೋಪ ಮಾಡಿರುವುದಲ್ಲದೇ ಅಧಿಕಾರ ದುರುಪಯೋಗ ಮಾಡಿಕೊಂಡು ಜಿಲ್ಲಾ ಪಂಚಾಯತಿ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸ್ಥಾಯಿ ಸಮಿತಿಯ ಅಧ್ಯಕ್ಷರುಗಳಿಗೆ ಪಾವಗಡ ತಾಲ್ಲೂಕಿನ ಸಣ್ಣ ನೀರಾವರಿ ಇಲಾಖೆಯಲ್ಲಿ ಕೈಗೊಂಡಿರುವ ಕಾಮಗಾರಿಗಳ ಬಗ್ಗೆ ಸ್ಥಳ ತನಿಖೆಯನ್ನು ಒಂದು ವಾರದಲ್ಲಿ ಕೈಗೊಂಡು ಅಲ್ಲಿ ನಡೆದಿರುವ ಕಾನೂನು ಬಾಹಿರ ಕ್ರಮಗಳ ಬಗ್ಗೆ, ಲೋಪದೋಷಗಳ ಬಗ್ಗೆವರದಿ ಸಲ್ಲಿಸಲು ಸೂಚಿಸಲಾಗಿತ್ತು. ಈ ಬಗ್ಗೆ ತೆಗೆದುಕೊಂಡಿರುವ ಕ್ರಮದ ಬಗ್ಗೆ ಪ್ರಶ್ನಿಸಿದಾಗ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ಏಕಾಏಕಿ ಸಭೆಯ ಮಧ್ಯೆ ಎದ್ದು ತನಿಖೆ ನಾನು ಮಾಡುವುದಿಲ್ಲ, ನೀವೇ ಏನಾದರೂ ಮಾಡಿಕೊಳ್ಳಿ ಎಂದು ಹೇಳಿ, ನೀವು ಹೇಳಿದ ಹಾಗೆ ಲೋಕಾಯುಕ್ತರು ಬಂದು ತನಿಖೆ ಮಾಡಿಕೊಳ್ಳಲಿ ಎಂದು ಹೇಳಿ ಜಿಲ್ಲಾ ಮಟ್ಟದ ಎಲ್ಲಾ ಅಧಿಕಾರಿಗಳು ಸಭೆಯಿಂದ ಹೊರನಡೆಯಲು ಪ್ರೇರೇಪಿಸಿ ಜಿಲ್ಲೆಯ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಗತಿ ಸಭೆ ನಡೆಯದಂತೆ ಮಾಡಿ ಅಗೌರವ ತೋರಿರುವ ಬಗ್ಗೆ ಹಾಗೂ ಜಿಲ್ಲಾ ಪಂಚಾಯತಿಯಲ್ಲಿ 12.03.2010ರಲ್ಲಿ ಅವರ ಮೇಲೆ ಸರ್ವಾನುಮತದಿಂದ ನಿರ್ಣಯವನ್ನೂ ಕೂಡ ಮಾಡಿದ್ದಾರೆ. ದಯಮಾಡಿ ಆ ಅಧಿಕಾರಿ ಮೇಲೆ ಕ್ರಮ ತೆಗೆದುಕೊಳ್ಳ ಬೇಕೆಂದು ಹೇಳಬಯಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ರೇವಣ್ಣನವರು ಏನು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ, ಅದರಲ್ಲಿ ತುಮಕೂರು ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯ ನಿರ್ವಹಣಾಧಿ ಕಾರಿಗಳ ನಡವಳಿಕೆ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಈಗಾಗಲೇ ಜಿಲ್ಲಾ ಪಂಚಾಯತಿಯ ಅಧ್ಯಕ್ಷರು ಮತ್ತು ಸದಸ್ಯರುಗಳು ಬಂದು ನನ್ನನ್ನು ಭೇಟಿಯಾಗಿ ಇದರ ಬಗ್ಗೆ ಮನವಿಯನ್ನೂ ಕೊಟ್ಟಿದ್ದಾರೆ. ನಾನು ಹೇಳುವುದೇ ನೆಂದರೆ, ಕೇವಲ ತುಮಕೂರು ಜಿಲ್ಲಾ ಪಂಚಾಯತಿ ಅಧಿಕಾರಿ ಮಾಡಿರುವುದಕ್ಕೆ ಸಂಬಂಧಪಟ್ಟಂತೆ ಮಾತ್ರ ಹೇಳುವುದಿಲ್ಲ, ಯಾವುದೇ ಅಧಿಕಾರಿಗಳಿರಬಹುದು ಅಥವಾ ಹಿರಿಯ ಅಧಿಕಾರಿಗಳಿರಬಹುದು, ಅವರು ಕೆಳಹಂತದ ಜನಪ್ರತಿನಿಧೀಗಳಿಗೆ ಮತ್ತು ಮೇಲ್ಮಟ್ಟದ ಜನ ಪ್ರತಿನಿಧಿಗಳಿಗೆ ಗೌರವವನ್ನು ಕೊಡಬೇಕು. ಅವರವರ ಸ್ಥಾನಮಾನವೇನಿದೆ, ಅದಕ್ಕೆ ಗೌರವ

ಕೊಡುವಂಥ ರೀತಿಯಲ್ಲಿ ಅಧಿಕಾರಿಗಳು ನಡೆದುಕೊಳ್ಳಬೇಕು. ಇದರ ಬಗ್ಗೆ ನನ್ನ ವ್ಯಾಪ್ತಿಯಲ್ಲಿ ಬರತಕ್ಕಂಥ ಎಲ್ಲಾ ಅಧಿಕಾರಿಗಳಿಗೆ ಸೂಚನೆಯನ್ನು ಕೊಡುವವನಿದ್ದೇನೆ. ಅದರ ಬಗ್ಗೆ ಪ್ರತ್ಯೇಕವಾದ ಸೂಚನೆಯನ್ನು ಕೊಡುತ್ತೇನೆ. ಈಗ ತುಮಕೂರಿನ ಜಿಲ್ಲಾ ಪಂಚಾಯತಿಯಲ್ಲಿ ನಡೆದಿರುವ ಘಟನೆ ಬಗ್ಗೆ ಈಗಾಗಲೇ ನಾನು Principal Secretary ಯವರಿಗೆ put up ಮಾಡಿ ಇದರ ಬಗ್ಗೆ ಸಂಪೂರ್ಣವಾಗಿ ವಿಚಾರ ಮಾಡಿಕೊಂಡು ನನಗೆ ವರದಿಯನ್ನು ಸಲ್ಲಿಸಬೇಕೆಂದು ಈಗಾಗಲೇ ನಾನು put up ಮಾಡಿದ್ದೇನೆ. ಅದು ಬಂದ ತಕ್ಷಣ ಅಲ್ಲೇನಾದರೂ ಅಧಿಕಾರಿಗಳು ತಪ್ಪು ಮಾಡಿದ್ದರೆ ಅದರ ಬಗ್ಗೆ ನಾವು ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು : ಈಗ ಗಮನ ಸೆಳೆಯುವ ಸೂಚನೆಗಳು.

Sri QAMARUL ISLAM : ಮಾನ್ಯ ಅಧ್ಯಕ್ಷರೆ ಒಂದು ನಿಮಿಷ. All the MLAs MLCs of the Hyderabad-Karnataka in this session, even Leader of the Opposition have agreed is on that; a resolution will be passed regarding article 371.

Mr. SPEAKER : Already it has been passed.

6. ಗಮನ ಸೆಳೆಯುವ ಸೂಚನೆಗಳು :

(ಗಮನ ಸೆಳೆಯುವ ಸೂಚನೆ ಕಳುಹಿಸಿದ್ದ ಶ್ರೀ ಎಂ.ನಾರಾಯಣಸ್ವಾಮಿ, ಶ್ರೀ ರಘುಪತಿ ಭಟ್, ಶ್ರೀ ರಮಾನಾಥ ರೈ ಸದನದಲ್ಲಿ ಹಾಜರಿರಲಿಲ್ಲ)

ಶ್ರೀ ಸಾ.ರಾ.ಮಹೇಶ್ : ಮಾನ್ಯ ಅಧ್ಯಕ್ಷರೆ, ನಿಯಮ 73 ರಡಿಯಲ್ಲಿ ಮಾನ್ಯ ಲೋಕೋಪಯೋಗಿ ಇಲಾಖೆಯ ಸಚಿವರ ಗಮನ ಸೆಳೆಯುತ್ತಿದ್ದೇನೆ.

ಶ್ರೀ ಗೋವಿಂದ ಎಂ.ಕಾರಜೋಳ : ಮಾನ್ಯ ಅಧ್ಯಕ್ಷರೆ, ಮಾನ್ಯ ಲೋಕೋಪಯೋಗಿ ಸಚಿವರು ಮೇಲ್ಮನೆಗೆ ಹೋಗಿದ್ದಾರೆ. ಆದಕಾರಣ ಇದಕ್ಕೆ ಉತ್ತರವನ್ನು ಮುಂದೆ ಕೊಡಿಸುತ್ತೇನೆ. ತಾವು ಮುಂದಿನ ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳಬಹುದು.

(ಗಮನ ಸೆಳೆಯುವ ಸೂಚನೆಯನ್ನು ಕಳುಹಿಸಿದ್ದ ಶ್ರೀ ಎಂ. ಕೃಷ್ಣಪ್ಪ, ಶ್ರೀ ನೆ.ಲ. ನರೇಂದ್ರಬಾಬು, ಶ್ರೀ ಬಿ.ಸಿ.ಪಾಟೀಲ್, ಶ್ರೀ ಹೆಚ್.ಎಸ್.ಪ್ರಕಾಶ್ ಈ ಸಂದರ್ಭದಲ್ಲಿ ಸದನದಲ್ಲಿ ಹಾಜರಿರಲಿಲ್ಲ)